ಶ್ರೀ ಎಚ್. ಡಿ. ದೇವೇಗೌಡ,—ನೇಕಾರರ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸರ್ಕಾರ ಡಿಪೋ ಗಳನ್ನು ಓಪನ್ ಮಾಡಬೇಕು ಎಂದು ಕೆಲವು ನಿರ್ಣಯ ತೆಗೆದುಕೊಂಡಿದ್ದಾರೆ ಸರಿ ಕಡೆ ಇದನ್ನು ಮಾಡುತ್ತಾರೆಂದು ಹೇಳಿದುದು ಸ್ವಾಗತಾರ್ಹ. ಹೈದರಾಬಾದ್, ಬಾಂಬೆ, ಕರ್ನಾಟಕ ವಿಭಾಗದಲ್ಲಿ ಉಲ್ಬಣ ಸಮಸ್ಯೆ ಕಂಡು ಬಂದಿದೆ. ಅವಶ್ಯಕವಾಗಿ ರೋಣ, ಬಾಗಲಕೋಟೆ, ಬಸವಕಟ್ಟಿ, ರಬಕವಿ ಮತ್ತು ಎಲ್ಲಿಮಗ್ಗುಗಳು ೨ ಸಾವಿರ ಇವೆ ಅಲ್ಲಿ ಇಂತಹ ಸಮಸ್ಯೆ ಎದುರಿಸತಕ್ಕ ಕಾಲದಲ್ಲಿ ಕೇಂದ್ರದಿಂದ ೨ ಲಕ್ಷ ಕೆಜಿ ನೂಲನ್ನು ಕೇಳಿದ್ದೀರಿ. ನಿಮಗೆ ೪೦ ಸಾವಿರ ಕೆಜಿ ನೂಲು ಬಂದಿದೆ. ಕ್ಷಾಮ ಪರಿಸ್ಥಿತಿಯಲ್ಲಿ ಇರತಕ್ಕ ಕಾಲದಲ್ಲಿ ಸಾಧ್ಯವಾದ ಮಟ್ಟಿಗೆ ಈ ಸೌಲಭ್ಯವನ್ನು ಪ್ರದೇಶಗಳಲ್ಲಿ ಇರತಕ್ಕ ಜನ ಪಡೆಯುವುದಕ್ಕೆ ಡಿಪೋ ಗಳನ್ನು ತೆಗೆದು ಈ ಮುಖ್ಯವಾದ ಸಮಸ್ಯೆಯನ್ನು ಬಿಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ .—ಮಾನ್ಯ ವಿರೋಧ ಪಕ್ಷದ ನಾಯಕರು ಏನು ಜನರಲ್ ಪ್ರಿನ್ಸಿಪಲ್ ಎನೆನೆಸಿಯೇಟ್ ಮಾಡಿದರು ಆ ಪ್ರಿನ್ಸಿಪಲ್ ಆಧಾರದ ಮೇಲೆ ಕೆಲವು ಡಿಪೋಗಳನ್ನು ಪ್ರಾರಂಭಿಸಬೇಕು ಎಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದು ಎಲ್ಲರಿಗೂ ತಿಳಿದಿರತಕ್ಕ ವಿಚಾರ. ಬಿಜಾಪುರ ಜಿಲ್ಲೆಯಲ್ಲಿ ಬನಹಟ್ಟಿ ಇಲ್ಕಲ್‌ನಲ್ಲಿ ಜಾಸ್ತಿ ಕಾನ್ಸ್‌ಂಟ್ರೇಷನ್ ಆಫ್ ವೀವರ್ಸ್ ಇದ್ದಾರೆ ಎಂದು ನಮ್ಮ ಅಂಕಿಅಂಶಗಳಿಂದ ತೀರ್ಮಾನಕ್ಕೆ ಬಂದಿದ್ದೇವೆ. ಚಿಂಚೋಳಿಯಲ್ಲಿ ವೀವರ್ಸ್ ಇಲ್ಲ ಎಂದು ಅಭಿಪ್ರಾಯ ವಲ್ಲ. ಅದುಕೂಡ ಪರಿಶೀಲನೆ ಮಾಡುತ್ತೇವೆ. ಮುಖ್ಯವಾದ ತೊಂದರೆ ಏನು ಎಂದರೆ ಅಗತ್ಯವಾಗಿ ಬೇಕಾಗಿರತಕ್ಕ ನೂಲು ಸಿಕ್ಕುವುದು. ಎರಡನೇಯದು ಬಹು ಮುಖ್ಯವಾಗಿರತಕ್ಕದ್ದು ಹಣಕಾಸಿನ ವ್ಯವಸ್ಥೆ. ೩೦ ಲಕ್ಷ ಒದಗಿಸಿ ಕೊಡಬೇಕಾದರೆ 64 ಫ್ಯಾಮಿನ್ ರಿಲೀಫ್ ಪ್ರಕಾರ ಒದಗಿಸಿಕೊಟ್ಟಿದ್ದೇವೆ. ಒಂದುಕೋಟಿ ೪೦ ಲಕ್ಷ ರೂಪಾಯಿಯ ಸ್ಕೀಮನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಈ ಸ್ಕೀಮ್ ಅದೃಷ್ಟವಶಾತ್ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆದು ಬಂದರೆ ವಿಕ್ಕ ಪ್ರದೇಶಗಳಲ್ಲೂ ಕೂಡ ನೂಲನ್ನು ವಿತರಣೆ ಮಾಡುವ ಕೇಂದ್ರಗಳನ್ನು ನಾವು ನಡೆಸಬಹುದಾಗಿದೆ. ದೊಡ್ಡಪಾಳ್ಯ ದೊಡ್ಡಬಳ್ಳಾಪುರ ತಾಲ್ಲೂಕು, ಪಾಂಡ್ಯ ಜಿಲ್ಲೆಯಲ್ಲಿ ಕೊಡಿಯಾಲ ಗ್ರಾಮ ಜನರು ಬಂದಿದ್ದರು ಯಾರ್ನ್ ಡಿಪೋ ಮಾಡ ಬೇಕೆಂದು ಕೇಳಿದ್ದಾರೆ. ಬೇರೆ ಎಲ್ಲಾ ಕಡೆಯಿಂದ ಇದರ ಬಗ್ಗೆ ಬೇಡಿಕೆಗಳು ಬರುತ್ತಿವೆ. ಸಾಮಾನ್ಯವಾಗಿ ಈ ಸಭೆ ಸದಸ್ಯರು ಹೇಳುತ್ತಿದ್ದಾರೆ. ಎಲ್ಲವನ್ನು ಮಾಡಬೇಕು ಎನ್ನುವುದು ನಮ್ಮ ಇಚ್ಛೆ, ಮಂತ್ರಿ ಆಸೆ. ಆದರೆ ಮುಖ್ಯವಾಗಿ ಹಣಕಾಸಿನ ಸೌಲತ್ತು ನೂಲಿನ ಸೌಲತ್ತು ಬೇಕು. ಈ ಎರಡು ಕಾರಣಗಳಿಂದ ಕುಂಟಿ ಕೊಂಡು ಮುಂದೆ ಹೋಗಬೇಕಾಗಿದೆ.

MUNSIFF-MAGISTRATE'S COURT AT SAKLESHPUR

496. SRI K. M. RUDRAPPA (Sakleshpur).—

Will the Minister for Law and Parliamentary Affairs be pleased to state.—

(*a*) whether any representation has been made by the public or local bodies of Sakleshpur Taluk for the establishment of a Munsiff-Magistrate's Court at Sakleshpur ;

(*b*) whether the Government have realised that the Munsiff-Magistrate's Court is essential for Sakleshpur ;

(*c*) if so, whether there is any proposal before the Government to establish it ?

SRI D. K. NAIKAR.—(Minister for Law and Parliamentary Affairs)

(*a*) Yes.

(*b*) No.

(*c*) Does not arise in view of reply to (*b*).

ಶ್ರೀ ಕೆ. ಎಂ. ರುದ್ರಪ್ಪ.—ಸ್ವಾಮಿ, ಸಕಲೇಶ್‌ಪುರ ಮಲೆನಾಡು ಪ್ರದೇಶವಾಗಿದೆ. ವಿಸ್ತರಣೆ ದೊಡ್ಡದು ಹಾಸನಕ್ಕೆ ಬರಬೇಕಾದರೆ 70-80 ಮೈಲು ದೂರವಾಗುತ್ತದೆ. ಆದ್ದರಿಂದ ಅಲ್ಲಿಗೆ ಒಂದು ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಸ್ಥಾಪನೆ ಮಾಡುವುದು ಅಗತ್ಯ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

†ಶ್ರೀ ಡಿ. ಕೆ. ನಾಯಕರ್.—ಆ ಬಗ್ಗೆ ಮುನಿಸಿಪಲ್ ಕೌನ್ಸಿಲ್‌ನಿಂದ ಒಂದು ರೆಪ್ರಸೆಂಟೇಷನ ಮಾನ್ಯ ಮುಖ್ಯಮಂತ್ರಿಗಳು ಹೋದಾಗ ಕೊಟ್ಟಿದ್ದು ಅದರ ಬಗ್ಗೆ ಹೈಕೋರ್ಟಿಗೆ ನಾವು ಬರೆದು ಕೇಳಿದಾಗ ಹೈಕೋರ್ಟು ಅಭಿಪ್ರಾಯದ ಪ್ರಕಾರ ಸದ್ಯಕ್ಕೆ ಕೋರ್ಟು ಕೊಡುವುದು ಅವಶ್ಯಕವಿಲ್ಲ ಎಂದ ನಿಗದಿಯಾಗಿ ತಿಳಿಸಿದ್ದಾರೆ.

ಶ್ರೀ ಕೆ. ಎಂ. ರುದ್ರಪ್ಪ.—ಹಾಸನದಲ್ಲಿ ಮುನ್ಸೀಫ್ ಕೋರ್ಟು ಇದೆ. ಮ್ಯಾಜಿಸ್ಟ್ರೇಟ್ ಕೋರ್ಟು ಇದೆ. ಕೋರ್ಟುಗಳಿಗೆ ವರ್ಕ್‌ಲೋಡ್ ಜಾಸ್ತಿಯಾಗಿದೆ. ಸಕಲೇಶ್‌ಪುರಕ್ಕೆ ಕೊಟ್ಟರೆ ಹಾಸನದಲ್ಲಿ ಕೆಲಸ ಕಡಿಮೆಯಾಗಿ ಸಕಲೇಶ್‌ಪುರಕ್ಕೆ ವರ್ಕ್‌ಲೋಡ್ ಸಾಕಷ್ಟು ಸಿಕ್ಕುತ್ತದೆ ಎಂದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ ಕೆ. ನಾಯಕರ್.—ಈಗಾಗಲೇ ಹೇಳಿದಹಾಗೆ ತಾವು ಹೇಳಿದ ಆಧಾರದ ಮೇಲೆ ಹೈಕೋರ್ಟು ಸಮಾಲೋಚನೆ ಮಾಡಿದಾಗ ಸದ್ಯದಮಟ್ಟಿಗೆ ಕೋರ್ಟು ಕೊಡುವುದು ಅವಶ್ಯಕ ಇಲ್ಲ ಎನ್ನುವುದನ್ನು ಅವರು ತಿಳಿಸಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಈಗ ತಾವು ಶೇಖರಿಸಿರತಕ್ಕ ಮಾಹಿತಿ ಬರೀ ಸಕಲೇಶ್‌ಪುರದ ಮಟ್ಟಿಗೆ ಮಾತ್ರ. ಆದರೆ ಕೇವಲ 6-7 ಮೈಲಿ ದೂರ ಇರುವ ಆಲೂರನ್ನು ಸಕಲೇಶ್‌ಪುರಕ್ಕೆ ಸೇರಿಸಿ ಮಾಹಿತಿ ಕಳುಹಿಸಿದರೆ ಒಂದು ಕೋರ್ಟು ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಡಿ. ಕೆ. ನಾಯಕರ್.—ಅದು ಸಲಹೆ ಮಾತ್ರ.

ಶ್ರೀ ಎಂ. ಬಿ ರಾಮಸ್ವಾಮಿ.—ಮುನ್ಸಿಫ್ ಮ್ಯಾಜಿಸ್ಟ್ರೇಟ್ ಕೋರ್ಟು ಬಹುಶಃ ಎಲ್ಲಾ ತಾಲ್ಲೂಕುಗಳಲ್ಲಿ ಇವೆ. ಆದರೆ ತಾಲ್ಲೂಕುಗಳಲ್ಲಿ ಇರುವ ಕೋರ್ಟುಗಳಿಗೆ ಹೆಚ್ಚಿಗೆ ಕೇಸಸ್ ಇರುವುದಿಲ್ಲ. ಅಲ್ಲೆ ಇರತಕ್ಕ ಜಡ್ಜ್‌ಸ್‌ಗಳಿಗೆ ಸರ್ಕಾರದ ಹಣ ವೇಸ್ಟ್ ಮಾಡುತ್ತಾ ಇದ್ದೇವೆ. ಆದುದರಿಂದ ಆಯಾಯ ತಾಲ್ಲೂಕುಗಳಲ್ಲಿ ಮುನ್ಸಿಫ್‌ಕೋರ್ಟು ಇರುವ ಕಡೆ ಒಂದೇ ಕೋರ್ಟು ಮಾಡಿದರೆ ಸೂಕ್ತ ಅಲ್ಲವೇ ?

ಶ್ರೀ ಡಿ. ಕೆ. ನಾಯಕರ್.—ಆ ಕೋರ್ಟುಗಳಲ್ಲಿ ಮೊಕದ್ದಮೆಗಳ ಸಂಖ್ಯೆ ಇರುವುದು, ಇಲ್ಲದೆ ಇರುವುದು ಹೈಕೋರ್ಟಿಗೆ ಸೇರಿದ್ದು ಮತ್ತು ಅಡ್ಮಿನಿಸ್ಟ್ರೇಷನ್ ಅವರಿಗೆ ಬಿಟ್ಟಿಕೊಟ್ಟ ವಿಷಯ. ಯಾವ ಕೋರ್ಟಿಗೆ ಕೇಸುಗಳು ಇವೆ ಯಾವ ಕೋರ್ಟಿಗೆ ಕೇಸುಗಳು ಇಲ್ಲ ಎನ್ನುವುದು, ಅದರ ಬಗ್ಗೆ ಯೋಗ್ಯ ನಿರ್ಣಯ ತೆಗೆದುಕೊಳ್ಳುವುದು ಹೈಕೋರ್ಟಿಗೆ ಬಿಟ್ಟ ವಿಷಯ.

ಶ್ರೀ ಕೆ. ಎಂ. ರುದ್ರಪ್ಪ.—ಸಕಲೇಶಪುರದ ಮ್ಯಾಜಿಸ್ಟ್ರೇಟ್ ಕೋರ್ಟು ಇಲ್ಲದೆ ಇರುವುದರಿಂದ ತೊಂದರೆಯಾಗಿದೆ ಮಲೆನಾಡಂ ಪ್ರದೇಶ ಎಂದು ಗಮನಕ್ಕೆ ತೆಗೆದುಕೊಂಡು ಅಲ್ಲಿಗೆ ಈಗಲಾದರೂ ಮುನ್ಸಿಫ್ ಮ್ಯಾಜಿಸ್ಟ್ರೇಟ್ ಕೋರ್ಟು ಕೊಡುವುದಕ್ಕೆ ಪರಿಶೀಲನೆ ನಡೆಸುತ್ತೀರಾ.?

[*No Answer*]

MADAM SPEAKER: I have held over the question. It may the taken up tomorrow. Now Question Hour is over.